# ಮಾತಿನ ಮುಖಗಳು

ಮನುಷ್ಯನನ್ನು ಉಳಿದೆಲ್ಲ ಜೀವಿಗಳಿಂದ ಪ್ರತ್ಯೇಕಿಸುವ ಬಹು ಮುಖ್ಯ ಲಕ್ಷಣವೆಂದರೆ ಆತನಿಗಿರುವ ಮಾತಾಡುವ ಸಾಮರ್ಥ್ಯ. ಮಾತು ಅಥವಾ ಭಾಷೆಯ ಬಳಕೆ ಮನುಷ್ಯನಿಗೆ ಸಂಪೂರ್ಣ ಅಪರಿಚಿತವಾಗಿದ್ದ ಕಾಲದಲ್ಲಿ ಆತ ಆಂಗಿಕಾಭಿನಯದ ಮೂಲಕವೋ, ಕೆಲವು ಬಗೆಯ ವಿಶಿಷ್ಟ ಧ್ವನಿಗಳನ್ನು ಹೊರಡಿಸುವುದರ ಮೂಲಕವೋ ತನ್ನ ಸಹಜೀವಿಗಳೊಡನೆ ಸಂವಹನ ನಡೆಸುತ್ತಿದ್ದಿರಬೇಕು. ಭಾಷೆಯ ಬಳಕೆಯೇ ಇಲ್ಲದ ಆ ಕಾಲಘಟ್ಟ ಮನುಷ್ಯಲೋಕದ ಪಾಲಿಗೆ ಕಗ್ಗತ್ತಲ ಯುಗವಾಗಿತ್ತು ಎನ್ನಬೇಕು. ಕಾಲ ಕ್ರಮೇಣ ಮನುಷ್ಯ ತನ್ನ ದೇಹದ ವಿವಿಧ ಅಂಗಗಳಾದ ಕಂಠ, ನಾಲಿಗೆ, ಹಲ್ಲು, ತುಟಿ– ಮುಂತಾದುವುಗಳನ್ನು ಬಳಸಿ, ತನ್ನಿಂದ ಹೊರಡುವ ಧ್ವನಿಯನ್ನು ನಿಯಂತ್ರಿಸಲು ಕಲಿತ; ತನ್ಮೂಲಕ ಭಾಷೆ ಅಥವಾ ಮಾತನ್ನು ಹುಟ್ಟುಹಾಕಿದ. ಭಾಷೆಯ ಉಗಮದಿಂದಾಗಿ ಸಂವಹನ ಕ್ರಿಯೆ ಸುಲಭಗೊಂಡಿತು; ಮಾನವನ ಇತಿಹಾಸದಲ್ಲಿ ಕತ್ತಲು ಕಳೆದು ಬೆಳಕು ಕಾಣಿಸಿಕೊಂಡಿತು. ಈ ಕಾರಣದಿಂದಲೇ ನಮ್ಮ ಪ್ರಾಚೀನ ವಿದ್ವಾಂಸರು ಭಾಷೆಯನ್ನು ಬೆಳಕಿಗೆ ಹೋಲಿಸಿರುವುದು.

ಭಾಷೆಯ ಆವಿಷ್ಕಾರ ಮನುಷ್ಯನನ್ನು ಪ್ರಾಕೃತಿಕ ಸ್ಥಿತಿಯಿಂದ ನಾಗರಿಕ ಸ್ತರಕ್ಕೆ ಏರಲು ಒಂದು ಏಣಿಯಾಯಿತು ಎನ್ನಬಹುದು. ಮಾತಿನ ಸಹಾಯವಿಲ್ಲದಿದ್ದರೆ, ಮನುಷ್ಯ ತನ್ನ ವೈಯಕ್ತಿಕ ಅನುಭವ ಅನ್ನಿಸಿಕೆಗಳನ್ನು, ನೋವು ನಲಿವುಗಳನ್ನು ತನ್ನ ಸಹಜೀವಿಗಳೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ಪೀಳಿಗೆಯ ಅನುಭವ, ಚಿಂತನೆ, ವಿಚಾರ– ಇವೆಲ್ಲವೂ ಮುಂದಿನ ಪೀಳಿಗೆಗೆ ಹರಿದುಬರಲು ಸಾಧ್ಯವಾಗಿರುವುದು ಭಾಷೆಯೆಂಬ ಸಾಧನದಿಂದಲೇ. ಭಾಷೆಯ ಬಲವಿಲ್ಲದಿದ್ದರೆ ಮನುಷ್ಯ ತನ್ನ ಜ್ಞಾನ ಮತ್ತು ಸೃಜನಶೀಲತೆಯನ್ನು ಬೆಳೆಸಿಕೊಳ್ಳಲಾಗುವುದಿಲ್ಲ. ಹೀಗೆ ಭಾಷೆಯೆಂಬುದು ಮನುಷ್ಯನನ್ನು ಭಾವನಾತ್ಮಕವಾಗಿ ಹಾಗೂ ಬೌದ್ಧಿಕವಾಗಿ ವಿಕಾಸಗೊಳ್ಳಲು ಸಹಾಯ ಮಾಡುವ ಪ್ರಬಲ ಮಾಧ್ಯಮ ಎಂದರೆ ಅತ್ಯುಕ್ತಿಯಲ್ಲ.

ಬೇರೆ ಬೇರೆ ಧ್ವನಿಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ಒಳಪಡಿಸಿ, ಮನುಷ್ಯ ಯಾದೃಚ್ಛಿಕವಾಗಿ ತನ್ನ ಭಾಷೆಯನ್ನು ನಿರ್ಮಿಸಿಕೊಂಡ. ಒಂದು ಪ್ರದೇಶದ ಜನ ತಮ್ಮದೇ ಆದ ವಿಶಿಷ್ಟ ಕಾರಣಗಳಿಂದ, ತಮ್ಮದೇ ರೀತಿಯಲ್ಲಿ ಧ್ವನಿ ವ್ಯವಸ್ಥೆ ಮಾಡಿಕೊಂಡು, ತಮಗಾಗಿ ಒಂದು ಭಾಷೆಯನ್ನು ಸೃಷ್ಟಿಸಿಕೊಂಡರು. ಹೀಗಾಗಿ ಪ್ರಪಂಚದಲ್ಲಿ ಅನೇಕ ಭಾಷೆಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಒಂದು ಭಾಷೆಯಿಂದಲೇ ಕವಲೊಡೆದು ಬೇರೆ ಬೇರೆ ಭಾಷೆಗಳು ಅಸ್ತಿತ್ವವನ್ನು ಪಡೆದ ಉದಾಹರಣೆಗಳು ಇರುವುದನ್ನು ಭಾಷಾ ವಿಜ್ಞಾನಿಗಳು ಗುರುತಿಸಿದ್ದಾರೆ. ಭಾಷೆಯ ಮೂಲ ಘಟಕಗಳಾದ ಪದಗಳು ಮೊದಲೇ ತಮ್ಮಲ್ಲಿ ಅರ್ಥವನ್ನು ಗರ್ಭೀಕರಿಸಿಕೊಂಡು ಹುಟ್ಟಿಕೊಂಡಿರಬಹುದು; ಅಥವಾ ಪದಗಳಿಗೆ ಅರ್ಥಪ್ರಾಪ್ತಿ ಆಮೇಲಾಗಿರಬಹುದು. ಒಟ್ಟಿನಲ್ಲಿ ಯಾವುದೇ ಒಂದು ಭಾಷೆ ತನ್ನೆಲ್ಲ ಸಮಗ್ರ ಸ್ವರೂಪದೊಂದಿಗೆ ಏಕಾಏಕಿ ಸೃಷ್ಟಿಯಾದುದಂತೂ ಅಲ್ಲ. ಭಾಷೆಯ ಬೆಳವಣಿಗೆ ಮನುಷ್ಯನ ನಾಗರಿಕತೆಯ ಇತಿಹಾಸದೊಂದಿಗೆ ತಳಕು ಹಾಕಿಕೊಂಡು, ನಿತ್ಯ ವಿಕಾಸ ಶೀಲವಾಗಿರುವಂಥದು.

ಮನುಷ್ಯನಿಗೆ ಕಣ್ಣಿಂದ ನೋಡುವ, ಕಿವಿಯಿಂದ ಕೇಳುವ, ಮೂಗಿನಿಂದ ವಾಸನೆಯನ್ನು ಗ್ರಹಿಸುವ, ನಾಲಿಗೆಯಿಂದ ರುಚಿಯನ್ನು ಗುರುತಿಸುವ, ಚರ್ಮದಿಂದ ಸ್ಪರ್ಶಾನುಭವವನ್ನು ಪಡೆಯುವ ಸಾಮರ್ಥ್ಯ ಹುಟ್ಟಿನಿಂದಲೇ ಬಂದಿರುತ್ತದೆ. ಆದರೆ ಭಾಷೆಯೆಂಬುದು ಹೀಗೆ ಜನ್ಮಜಾತವಾಗಿ, ಸಹಜವಾಗಿ ಬರುವಂಥದಲ್ಲ. ಮನುಷ್ಯ ಅದನ್ನು ಪ್ರಯತ್ನಪೂರ್ವಕವಾಗಿ ಕಲಿಯಬೇಕಾಗುತ್ತದೆ. ಹೀಗೆ ಪ್ರಯತ್ನ ಪೂರ್ವಕ ಗಳಿಸಿಕೊಂಡ ಭಾಷಾ ಕೌಶಲವನ್ನು ಮನುಷ್ಯ ಸಂವಹನ ಮಾಧ್ಯಮವಾಗಿ ಬಳಸುತ್ತಾನೆ. ಭಾಷೆಗಿಂತಲೂ ಯಶಸ್ವಿಯಾದ ಇನ್ನೊಂದು ಭಾವವಾಹಕ ಮನುಷ್ಯನ ಪಾಲಿಗೆ ಸದ್ಯಕ್ಕಂತೂ ಸಿಕ್ಕಿಲ್ಲ. ಮಾತಾಡುವ ವ್ಯಕ್ತಿ ಬಳಸುವ ಭಾಷೆ ಕೇಳುಗನಿಗೆ ಪರಿಚಿತವಾಗಿದ್ದಾಗ ಮಾತ್ರ ಭಾಷೆಯ ಕಾರ್ಯ ಯಶಸ್ವಿಯಾಗುತ್ತದೆ. ಮಾತಿನೊಂದಿಗೆ ಅರ್ಥದ ರವಾನೆ ಯಾಗುತ್ತದೆ. ಇದನ್ನೇ 'ವಾಗರ್ಥ ಪ್ರತಿಪತ್ತಿ' ಎನ್ನುವುದು. ಹೀಗಾಗದಿದ್ದಲ್ಲಿ ಒಬ್ಬನ ಮಾತು ಇನ್ನೊಬ್ಬನಿಗೆ ಕೇವಲ ಅರ್ಥವಿಹೀನ ಸದ್ದು ಎನ್ನಿಸುತ್ತದೆ.

ಇಷ್ಟೊಂದು ಸಂವಹನ ಸಾಮರ್ಥ್ಯವಿರುವ ಭಾಷೆಗೆ ತನ್ನದೇ ಆದ ಮಿತಿಗಳೂ ಇವೆ ಎಂಬುದು ಸುಳ್ಳಲ್ಲ. ನಮ್ಮ ಅನೇಕ ಭಾವ ಭಾವನೆಗಳಿಗೆ ಮಾತಿನ ವೇಷ ತೊಡಿಸಿ, ಅವನ್ನು ಇನ್ನೊಬ್ಬರ ಅನುಭವಕ್ಕೆ ತರುವುದು ಸಾಧ್ಯವೇ ಆಗುವುದಿಲ್ಲ. ಮಾತಿನ ಮೂಲಕ ಅಭಿವ್ಯಕ್ತಗೊಳಿಸಲಾಗದ 'ಅನಿರ್ವಚನೀಯ' ಸಂಗತಿಗಳು ಲೆಕ್ಕವಿಲ್ಲದಷ್ಟಿವೆ. ಎಷ್ಟೋ ಸಂದರ್ಭಗಳಲ್ಲಿ ಭಾವನೆಗಳನ್ನು ಪ್ರಕಟಿಸಲಾಗದೇ ಮಾತು ಸೋಲುತ್ತವೆ. ಕವಿಗಳೂ, ಚಿಂತಕರೂ ತಮ್ಮದೇ ಆದ ರೀತಿಯಲ್ಲಿ ಮಾತಿನ ಸಂವಹನ ಶಕ್ತಿಯನ್ನು ಉಜ್ವಲಗೊಳಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಇಷ್ಟಾದರೂ ಮಾತಿನ 'ಕೊರಗಿನ ಮುಖ' ಸಂಪೂರ್ಣ ಮರೆಯಾಗಿಲ್ಲ; ಮರೆಯಾಗುವುದೂ ಇಲ್ಲ!

■ ವೈನತೇಯ

## ಮಾತೇ ಮುತ್ತು

★ ಲೋಕದಲ್ಲಿ ನಮ್ಮ ಒಳಿತಿಗಾಗಿಯೇ ಇರುವ ಒಬ್ಬ ವ್ಯಕ್ತಿ ದೈವ ಯೋಗದಿಂದ ಎಲ್ಲಿಯೋ ಇರುತ್ತಾನೆ.

–ಮಹಾಭಾರತ

★ ಯಾವ ರಾಜನು ಗೂಢಚಾರರನ್ನು ನೇಮಿಸಿಕೊಂಡಿಲ್ಲವೋ, ಯಾವನು ಉಚಿತ ಕಾಲದಲ್ಲಿ ಪ್ರಜೆಗಳಿಗೆ ದರ್ಶನ ನೀಡುವುದಿಲ್ಲವೋ, ಯಾವನು ಕಂಡವರ ಮಾತಿಗೆ ಕಟ್ಟುಬಿದ್ದು ಪರಾಧೀನನಾಗಿ ವರ್ತಿಸುವನೋ– ಅವನನ್ನು ಪ್ರಜೆಗಳು ನದಿಯ ಕೆಸರನ್ನು ಆನೆಗಳಿಗೆ ವರ್ಜಿಸುವಂತೆ ದೂರವಿಡುತ್ತಾರೆ.

–ರಾಮಾಯಣ

★ ವಿಪತ್ತು ಬರುವ ಮೊದಲೇ ಪ್ರತಿಕ್ರಿಯೆ ಮಾಡುವವನು ಹಾಗೂ ಸಮಯಕ್ಕೆ ತಕ್ಕಂತೆ ಬುದ್ಧಿಯನ್ನು ಉಪಯೋಗಿಸುವವನು– ಇವರಿಬ್ಬರೂ ಸುಖವನ್ನು ಪಡೆಯುತ್ತಾರೆ. ಆಗುವುದಾಗಲಿ ಎನ್ನುವವನು ನಾಶ ಹೊಂದುತ್ತಾನೆ.

–ಪಂಚತಂತ್ರ

★ ಬೇರೊಬ್ಬರ ಗುಲಾಮನಾದ ಕೂಡಲೇ ಮನುಷ್ಯನ ಅರ್ಧದಷ್ಟು ಗುಣ ದೂರಾಗುತ್ತದೆ.

–ಜವಾಹರಲಾಲ್ ನೆಹರೂ

★ ನೀವು ದೊಡ್ಡ ಮನುಷ್ಯರಾಗಿದ್ದರೆ, ಯಾವ ಕರ್ತವ್ಯವನ್ನೂ ಸಣ್ಣದೆಂದು ಭಾವಿಸಲಾರಿರಿ.

–ಜಾರ್ಜ್ ಮೆಕ್ಡೋನಾಲ್ಡ್

★ ನಿಜವಾದ ಗೆಳೆಯ ದರ್ಪಣ ಇದ್ದಂತೆ. ಅವನು ನಿನ್ನ ಒಳಿತು ಮತ್ತು ಕೆಟ್ಟದ್ದನ್ನು ನಿಸ್ಸಂಕೋಚವಾಗಿ ತಿಳಿಸುತ್ತಾನೆ.

–ಬರ್ನಾರ್ಡ್ ಶಾ

★ ಬೇವಿನ ಕಹಿ ಬಾಳಿನಲ್ಲಿ ಹೂವಿನ ನರುಗಂಪು ಸೂಸಿ ಜೀವ ಕಳೆಯ ತರುತಿದೆ.

–ದ.ರಾ.ಬೇಂದ್ರೆ

★ ಪಾಂಡಿತ್ಯ ಉಳ್ಳವರು ಬಹುಮಂದಿ, ವಿವೇಕ ಉಳ್ಳವರು ಬಹು ಕಡಿಮೆ.

–ಡೆಮೊಕ್ರೆಟಿಸ್

★ ವ್ಯರ್ಥ ಕಾಲಹರಣ ಮಾಡುವವರು ಅಪಾಯಕಾರಿಗಳು, ಅವರ ಬಗ್ಗೆ ಎಚ್ಚರದಿಂದಿರು.

–ಅನಾಮಿಕ

★ ತಪ್ಪನ್ನು ಮಾಡುವ ಮೊದಲೇ ಮುಖಂಡನನ್ನು ಆಕ್ಷೇಪಿಸುತ್ತಾರೆ! ಒಳ್ಳೆಯದನ್ನು ಮಾಡುವ ಮೊದಲೇ ಹೊಗಳುತ್ತಾರೆ!

–ಫಿನ್ನಿಶ್ ಗಾದೆ

★ ಜನರನ್ನು ನೀತಿ ಮಾರ್ಗದಲ್ಲಿ ಬೆಳೆಸಿ ತಂದಿರುವುದು ಭಗವಂತನ ಬಗೆಗೆ ಭಯ ಮತ್ತು ಪ್ರೀತಿ. ಆದ್ದರಿಂದ ದೇವರಿಲ್ಲದೆ ಮನುಷ್ಯ ಬದುಕಲಾರನೆನಿಸುತ್ತದೆ.

–ಡಿ.ವಿ.ಗುಂಡಪ್ಪ

★ ಉತ್ತಮ ಗುಣ ನೀರಿನಂತೆ, ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತದೆ. ಕೆಳ ಮಟ್ಟದಲ್ಲೇ ನಿಲ್ಲುತ್ತದೆ.

–ಲೋಟ್ಸು